ಆ) ಪರಿಹಾರ ಈಗಿನ ಪರಿಸ್ಥಿತಿಗನುಗುಣವಾಗಿ ಕೊಡಲಾಗುವುದೆ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಪರಿಹಾರ ಕೊಡುವ ದರವನ್ನು ೧೯೭೭ನೇ ಇಸವಿಯಲ್ಲಿ ನಿಗದಿಮಾಡಲಾಯಿತು.

ಆ) ಹಾಲಿ ಅಧಿಕೃತವಾಗಿ ನಿಗದಿ ಮಾಡಿರು ದರದಂತೆ ಪರಿಹಾರ ಧನವನ್ನು ಕೊಡಲಾಗುತ್ತೆ. ಎಲ್ಲಿ ನಿಗದಿ ಮಾಡಿರುವ ಪರಿಹಾರ ಧನವನ್ನು ಒಪ್ಪುತ್ತಿಲ್ಲವೊ ಅಲ್ಲಿ ಪ್ರತಿಯೊಂದು ಪ್ರಕರಣವನ್ನು ಅದರ ಅರ್ಹತೆ ಮತ್ತು ಪುನರ್ವಿಮರ್ಶೆಗೆ ಇರುವ ಕಾರಣಗಳನ್ನು ಗಮನಿಸಿ ತೀರ್ಮಾನ ತೆಗೆದು ಕೊಳ್ಳಲಾಗುವುದು.

ಶ್ರೀ ಎನ್. ಗಂಗಾಧರ್.—ಮಾನ್ಯ ಅಧ್ಯಕ್ಷರೇ ೧೯೭೭ರಲ್ಲಿ ನಿಗಧಿ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ೧೯೭೭ನೇ ಇಸವಿಯಲ್ಲಿ ತೆಂಗಿನ ಕಾಯಿಯ ಬೆಲೆ ೧೦೦ಕ್ಕೆ ೫೦೦–೬೦೦ ರೂಪಾಯಿಗಳು ಇತ್ತು. ಆದರೆ ಇವತ್ತು ೧೦೦ ತೆಂಗಿನ ಕಾಯಿಯ ಬೆಲೆ ೩೦೦೦–೪೦೦೦ ರೂಪಾಯಿಗಳು ಆಗಿದೆ. ತೆಂಗಿನ ಮರದ ಆಯಸ್ಸು ೧೦೦ ವರ್ಷಗಳು. ಈ ಮರದಲ್ಲಿ ಸುಮಾರು ೨೦–೩೦ ಸಾವಿರ ರೂಪಾಯಿಗಳು ಬರುತ್ತದೆ. ಈ ಬಗ್ಗೆ ಕೋರ್ಟಿಗೆ ಹೋದರೆ ವಕೀಲರಿಗೆ ಲಾಭವಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಗಮನಕೊಟ್ಟು ಸೂಕ್ತ ರೀತಿಯ ಬೆಲೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿರುವಂತೆ ೮–೧೦ ವಯಸ್ಸಾಗಿರುವ ತೆಂಗಿನ ಮರಗಳಿಗೆ ೩೫೫ ರೂಪಾಯಿಗಳು. ೫–೬ ವರ್ಷ ವಯಸ್ಸಾಗಿರುವ ತೆಂಗಿನ ಮರಗಳಿಗೆ ೩೦೦ ರೂಪಾಯಿಗಳು. ಬರೀ ೫ ವರ್ಷದ ತೆಂಗಿನ ಮರಕ್ಕೆ ೧೦೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಮಾನ್ಯ ಸದಸ್ಯರು ಇನ್ನೂ ಹೆಚ್ಚಿನ ಪರಿಹಾರ ಕೊಡಬೇಕೆಂದು ಕೇಳುತ್ತಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡೋಣ.

ಅಭಾವ ಕಾಮಗಾರಿಗಳು ಮಂತ್ರು ಬಂಡವಾಳಗಳು

೧೦೩೦. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) ಮಾನ್ಯ ಕಂದಾಯ ಹಾಗೂ ಯೋಜನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಅಭಾವ ಪರಿಹಾರಕ್ಕಾಗಿ ರಾಣೆಬೆನ್ನೂರು ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣವೆಷ್ಟು? (ಇಲಾಖಾವಾರು ಮಾಹಿತಿ ಒದಗಿಸುವುದು)

ಆ) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣವೆಷ್ಟು?

ಇ) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ ಅಭಾವಕ್ಕೊಳಗಾದ ಒಟ್ಟು ಹಳ್ಳಿಗಳೆಷ್ಟು?

ಈ) ಅಭಾವ ಪರಿಹಾರ ಕಾಮಗಾರಿಗಳ ಮೇಲ್ವಿಚಾರಣೆ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು ಉತ್ತರಿಸುವರು).—

ಅ) ಇಲಾಖಾವಾರು ಒಟ್ಟು ರಾಣೇಬೆನ್ನೂರು ತಾಲ್ಲೂಕಿಗೆ ಈ ಕೆಳಕಂಡಂತೆ ಅಭಾವ ಪರಿಹಾರಕ್ಕಾಗಿ ಹಣ ಬಿಡುಗಡೆ ಮಾಡಲಾಗಿದೆ.

೧)	ಕ್ಷೇತ್ರಾಭಿವೃದ್ಧಿ ಅಧಿಕಾರಿ	೧.೭೫ ಲಕ್ಷ
೨)	ಲೋಕೋಪಯೋಗಿ	೨.೭೫ ,,
೩)	ಸಣ್ಣ ನೀರಾವರಿ (ಎಂ.ಐ)	೨.೧೫ ,,
೪)	ಕೃಷಿ ಅಧಿಕಾರಿ (ಭೂಸಾರ ಸಂರಕ್ಷಣೆ)	೦.೬೬ ,,
೫)	ವಲಯ ಅರಣ್ಯಾಧಿಕ್ಷಾರಿ	೦.೬೦ ,,
	ಒಟ್ಟು	೭.೯೧

ಅ) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣವು ಈ ಕೆಳಕಂಡಂತಿದೆ.

	ತಾಲ್ಲೂಕು	ರೂ. ಲಕ್ಷದಲ್ಲಿ
೧)	ಧಾರವಾಡ	೪.೫೩
೨)	ಹುಬ್ಬಳ್ಳಿ	೫.೨೧
೩)	ಕಲ್‌ಘಟಗಿ	೩.೫೮
೪)	ನವಲಗುಂದ್	೪.೬೫
೫)	ಗದಗ್	೧೦.೫೧
೬)	ಮುಂಡರಗಿ	೭.೬೬
೭)	ನರಗುಂದ	೩.೭೪
೮)	ರೋಣ್	೭.೮೦
೯)	ಹಾನಗಲ್	೪.೨೪
೧೦)	ಕುಂದಗೋಳ್	೭.೫೦
೧೧)	ಸವನೂರ್	೮.೩೮
೧೨)	ಶಿಗ್ಗಾನ್	೫.೭೦
೧೩)	ಶಿರಹಟ್ಟಿ	೯.೭೭
೧೪)	ಬ್ಯಾಡಗಿ	೬.೬೨
೧೫)	ಹಾವೇರಿ	೮.೯೫
೧೬)	ಹಿರೇಕೆರೂರು	೫.೫೫
೧೭)	ರಾಣೆಬೆನ್ನೂರು	೭.೯೧
	ಒಟ್ಟು	೧೧೨.೨೯

೪) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ ಅಭಾವಕ್ಕೊಳಗಾದ ಹಳ್ಳಿಗಳು ಈಕೆಳಕಂಡಂತಿವೆ.

	ತಾಲ್ಲೂಕುಗಳು	ಹಳ್ಳಿಗಳು
೧)	ಧಾರವಾಡ	೧೦೫
೨)	ಹುಬ್ಬಳ್ಳಿ	೪೭
೩)	ಕುಷ್ಟಗಿ	೮೨
೪)	ನವಲಗುಂದ	೫೮
೫)	ಗದಗ್	೫೪
೬)	ಮುಂಡರಗಿ	೪೮
೭)	ನರಗುಂದ	೩೩
೮)	ರೋಣ	೯೧
೯)	ಹಾನಗಲ್	೧೪೨
೧೦)	ಕುಂದಗೋಳ್	೬೬
೧೧)	ಸವನೂರು	೬೨
೧೨)	ಶಿಗ್ಗಾನ್	೯೩
೧೩)	ಶಿರಹಟ್ಟಿ	೭೬
೧೪)	ಬ್ಯಾಡಗಿ	೬೨
೧೫)	ಹಾವೇರಿ	೮೬
೧೬)	ಹಿರೇಕೆರೂರು	೧೨೪
೧೭)	ರಾಣೆಬೆನ್ನೂರು	೧೦೩
	ಒಟ್ಟು	೧,೩೨೨

ಈ) ಅಭಾವ ಪರಿಹಾರ ಕಾಮಗಾರಿಗಳನ್ನು ನಡೆಸುವ ಬೇಳೆ, ಮೇಲ್ವಿಚಾರಣೆ ನೋಡಿಕೊಳ್ಳಲು ಅಧಿಕಾರಿಗಳ ಒಂದು ಕಾವಲು ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಪೂರ್ವಭಾವಿ ಮಾಹಿತಿಯಲ್ಲದೇ ಹಟಾತ್ ತಪಾಸಣೆಯನ್ನು ಮಾಡಿ ಕೆಲಸ ಕಾರ್ಯಗಳ ವೀಕ್ಷಣೆ ಮಾಡುವ ವ್ಯವಸ್ಥೆ ಇದೆ. ಇದಲ್ಲದೆ, ಜಿಲ್ಲಾಧಿಕಾರಿ, ವಿಶೇಷ ಜಿಲ್ಲಾಧಿಕಾರಿಗಳು, ಸಹಾಯಕ ಜಿಲ್ಲಾಧಿಕಾರಿಗಳು ಕಾರ್ಯನಿರ್ವಾಹಕ ಅಭಿಯಂತರರು, ಸೂಪರಿಂಟೆಂಡಿಂಗ್ ಅಭಿಯಂತರರು, ಅಭಿವೃದ್ಧಿ ಸಹಾಯಕರು, ಆಗಿಂದಾಗ್ಗೆ ಪರಿಹಾರ ಕಾಮಗಾರಿಗಳನ್ನು ತಪಾಸಣೆ ನಡೆಸುತ್ತಾರೆ, ಇದರ ಜೊತೆಗೆ ಅನೇಕ ಶಾಸಕರು ಭೇಟಿ ನೀಡಿ ಪರಿಹಾರ ಕಾಮಗಾರಿಗಳ ಪ್ರಗತಿಯನ್ನು ನೋಡುತ್ತಿರುತ್ತಾರೆ. ಅದಲ್ಲದೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಸಚಿವರು ಸಹ ಕೆಲವು ತಾಲ್ಲೂಕುಗಳ ಕಾಮಗಾರಿಗಳನ್ನು ಪರೀಕ್ಷಿಸಲು ಅನಿರೀಕ್ಷಿತವಾಗಿ ಭೇಟಿ ಮಾಡಿದ್ದಾರೆ.

ಶ್ರೀ ಕೆ. ಬಿ. ಕೋಳಿವಾಡ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನನ್ನ (೧) ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳು ಇವೆ. ಪ್ರತಿಯೊಂದು ತಾಲ್ಲೂಕಿನಲ್ಲಿರುವಂತಹ ಹಳ್ಳಿಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಮತ್ತು ಪ್ರತಿಯೊಂದು ತಾಲ್ಲೂಕಿಗೆ ಒದಗಿಸಿಕೊಟ್ಟಿರುವ ಹಣದ ಮೊಬಲಗನ್ನು ಸಹ ಹೇಳಿದ್ದಾರೆ. ಆದರೆ ನಮ್ಮ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಸುಮಾರು ೧೦೦ ಹಳ್ಳಿಗಳು ಇವೆ. ಇಲ್ಲಿಗೆ ಸುಮಾರು ೭.೯೧ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದೇ ರೀತಿ ಹಾವೇರಿ ತಾಲ್ಲೂಕಿನಲ್ಲಿ ಸುಮಾರು ೮೬ ಹಳ್ಳಿಗಳು ಇದ್ದು ಅಲ್ಲಿಗೆ ಸುಮಾರು ೮.೫೫ ರೂಪಾಯಿಗಳನ್ನು ಕೊಟ್ಟಿದ್ದಾರೆ. ಶಿರಟ್ಟಿ ತಾಲ್ಲೂಕಿನಲ್ಲಿ ೭೬ ಹಳ್ಳಿಗಳು ಮಾತ್ರ ಇದ್ದು ಅಲ್ಲಿಗೆ ಸುಮಾರು ೯.೭೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಸವದತ್ತಿ ತಾಲ್ಲೂಕಿನಲ್ಲಿ ಸುಮಾರು ೬೨ ಹಳ್ಳಿಗಳು ಇದ್ದು ೮.೩೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ರಾಣೆಬೆನ್ನೂರು ತಾಲೂಕಿನಲ್ಲಿ ೧೦೦ ಹಳ್ಳಿಗಳು ಇದ್ದರೂ ಸಹ ಕಡಿಮೆ ಹಣವನ್ನು ಕೊಟ್ಟಿದ್ದೀರಿ. ಇದರಿಂದ ನನಗನಿಸುತ್ತದೆ ತಾವು ಪಾರ್ಟಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹಣವನ್ನು ಬಿಡುಗಡೆ ಏನಾದರೂ ಮಾಡಿದ್ದೀರೋ ಏನೋ ಎಂದು, ಇನ್ನು ಎರಡನೆಯದಾಗಿ ಸುಮಾರು ೧೦-೧೨ ದಿವಸಗಳಿಂದ ಒಂದು ಫೈಸೆ ಕೆಲಸ ಕೂಡ ನಡೆಯುತ್ತಿಲ್ಲ. ಯಾವುದೇ ಇಲಾಖೆಯಲ್ಲಿ ಕೇಳಿದರೂ ಸಹ ಹಣ ವಿಲ್ಲವೆಂದು ಹೇಳುತ್ತಿದ್ದಾರೆ. ಜನ ಅಲ್ಲಿ ಕೆಲಸವಿಲ್ಲದೆ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಆದಷ್ಟು ಬೇಗ ಅಲ್ಲಿಗೆ ಹಣ ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡಿಸುತ್ತೀರಾ? ಮೂರನೆಯದಾಗಿ ತಾವು ಅನೇಕ ಕೆಲಸ ಕಾರ್ಯಗಳನ್ನು ಒಪ್ಪಿಸಿದ್ದೀರಿ. ಆ ಬಗ್ಗೆ ಸರಿಯಾದ ಸೂಪರ್‌ವೈಜ್ ಕೆಲಸ ನಡೆಯುತ್ತಿದೆಯೇ ಅಥವಾ ಇಲ್ಲವೆ? ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ. ಹಣ ಪೋಲಾಗುತ್ತಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಪಕ್ಷಗಳ ವಿಚಾರ ಇಲ್ಲ. ಈಗ ಗದಗ ತಾಲ್ಲೂಕಿನಲ್ಲಿ ಕೇವಲ ೫೪ ಹಳ್ಳಿಗಳು ಮಾತ್ರ ಇವೆ. ಅಲ್ಲಿಗೆ ಸುಮಾರು ೧೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದೇ ರೀತಿಯಲ್ಲಿ ನವಲಗುಂದ ತಾಲ್ಲೂಕಿನಲ್ಲಿ ೮೨ ಹಳ್ಳಿಗಳು ಮಾತ್ರ ಇವೆ. ಅಲ್ಲಿಗೆ ಸುಮಾರು ೮ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಾವು ಜನಸಂಖ್ಯಾ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡುತ್ತೇವೆ. ಜನತಾ ಪಕ್ಷದ ಸದಸ್ಯರಲ್ಲದೆ ಇರುವಂತಹ ಕಡೆಗಳಲ್ಲಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದೇವೆ ಈಗ ಪರಿಹಾರ ಕಾಮಗಾರಿಗಳಿಗಾಗಿ ೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಆಗ ರಾಣೆಬೆನ್ನೂರು ತಾಲ್ಲೂಕಿಗೂ ಸೂಕ್ತ ರೀತಿಯಲ್ಲಿ ಹಣ ಬಿಡುಗಡೆ ಮಾಡುವ ಆಶ್ವಾಸನೆ ಕೊಡುತ್ತೇನೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಸಾಗುವಳಿಗೆ ಯೋಗ್ಯವಾದ ಕಂದಾಯ ಜಮೀನಿನ ಲಭ್ಯವಿರುವ ಬಗ್ಗೆ

೬೫೩. ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ವಿತರಣೆ ಮಾಡಲು ಸಾಗುವಳಿಗೆ ಯೋಗ್ಯವಾದ ಕಂದಾಯ ಜಮೀನಿನ ವಿಸ್ತೀರ್ಣವೆಷ್ಟು?